


# ರಥಬೀದಿ ಅಲ್ಲ..ಕೊಡೆಬೀದಿ..!

**ರಥಬೀದಿ ಗೊತ್ತು. ಆದರೆ ಇದೇನಿದು ಕೊಡೆಬೀದಿ?**

ಪ್ರತೀ ವರ್ಷ ಜುಲೈ ತಿಂಗಳಲ್ಲಿ ಪೋರ್ಚುಗಲ್‌ನ 'ಅಗುವೇಡಾ' ಎಂಬ ನಗರದಲ್ಲಿ 'ಅಜಿಟಾಗುವೆಲ್ಲಾ ' ಕಲಾ ಉತ್ಸವದ ಅಂಗವಾಗಿ ನೂರಾರು ಬಣ್ಣದ ಕೊಡೆಗಳನ್ನು ಜನಸಾಮಾನ್ಯರು ನಿತ್ಯ ಓಡಾಡುವ ಓಣಿಗಳ ಮೇಲೆ ಆಕಾಶದಲ್ಲಿ ಸಾಲಾಗಿ ತೂಗು ಹಾಕಿ, ಆಕರ್ಷಕ ಕೊಡೆ ಬೀದಿಗಳನ್ನು ಸೃಷ್ಟಿಸಲಾಗುತ್ತದೆ.

ಈ ಅಭೂತಪೂರ್ವ ಪರಂಪರೆಯನ್ನು ಮೂರು ವರ್ಷಗಳ ಹಿಂದೆಯಷ್ಟೆ (2012 ರಲ್ಲಿ) 'ಸೆಕ್ಸ್ಯಾಫಿಯೆರಾ ಪ್ರೊಡ್ಯುಕೋಸ್' ಎಂಬ ಸಂಸ್ಥೆಯು ಹುಟ್ಟುಹಾಕಿದೆ. ಅಂತರ್ಜಾಲದಲ್ಲಿ ಹಾರಾಡಿದ ಇದರ ಛಾಯಾಚಿತ್ರಗಳು, ವೀಡಿಯೊ ಚಿತ್ರಣಗಳು ಅಲ್ಪಾವಧಿಯಲ್ಲಿಯೇ ಅಗುವೇಡಾ ಪಟ್ಟಣಕ್ಕೆ ವಿಶ್ವವ್ಯಾಪಿ ಜನಪ್ರಿಯತೆಯನ್ನು ದಕ್ಕಿಸಿ ಕೊಟ್ಟಿವೆ! ಮಾತ್ರವಲ್ಲದೆ ಪ್ರವಾಸಿಗರ ದಂಡೇ ಈ ತಾಣಕ್ಕೆ ದೌಡಾಯಿಸುವಂತಾಗಿಸಿದೆ.

ನೀಲಿಯಾಗಸದ ಕೆಳಗೆ ನೇತಾಡಿಸಿದ ವರ್ಣರಂಜಿತ ಛತ್ರಿಗಳು ತಮ್ಮ ವೈಭವೋಪೇತ ವಿವಿಧ ರಂಗುಗಳೊಂದಿಗೆ ರಂಜಿಸುವುದಷ್ಟೇ ಅಲ್ಲದೆ ಬಾಕಿ ಸಮಯ ಬಾನಿಗೆ ತೆರೆದುಕೊಂಡಿರುವ ಬೋಳು ರಸ್ತೆಗಳಲ್ಲಿ ನೆರಳು ಚೆಲ್ಲಿ ಬಿಸಿಲಿನ ಧಗೆಯಿಂದಲೂ ಜನರನ್ನು ರಕ್ಷಿಸಿ ಹಾಯೆನಿಸುವಂತಾಗಿಸುತ್ತದೆ. ಅಕಸ್ಮಾತ್ ಮಳೆ ಸುರಿದರೂ ಬೀದಿಯಲ್ಲಿ ಸಾಗುವವರು ಒದ್ದೆಯಾಗುವ ಪ್ರಮೇಯವೂ ಇಲ್ಲ! ಕ್ರಮೇಣ ಪ್ರಿಂಟೆಡ್ ಛತ್ರಿಗಳನ್ನು ಬಳಸಲಾರಂಭಿಸಿದ್ದು ಅವುಗಳು ಸೃಜಿಸಿದ ಛಾಯೆ ಕೆಳಗಿನ ಮೃದು ಕಲ್ಲು ಹಾಸಿನ ನೆಲದ ಮೇಲೆ ವಿನ್ಯಾಸಕ ಚಿತ್ತಾರಗಳನ್ನು ಚಿತ್ರಿಸಿ, ಹಾದು ಹೋಗುವ ದಾರಿಹೋಕರು ಹಾಗೂ ಸಂದರ್ಶಕರಿಗೊಂದು ಮಾಂತ್ರಿಕ ಅನುಭವದ ರೋಚಕತೆ ನೀಡುತ್ತದೆ.

ಪೋರ್ಚುಗಲ್ಲಿಗೆ ಪ್ರವಾಸ ಹೋಗುವ ಪ್ರವಾಸಿಗರು ಜುಲೈ ತಿಂಗಳಲ್ಲಿ ಅಥವಾ ಆಸುಪಾಸಿನ ಸಮಯದಲ್ಲಿ ಸಂದರ್ಶಿಸುವವರಿದ್ದರೆ, ಅಗುವೇಡಾ ನಗರದ ಕೊಡೆ ಬೀದಿಯ ವರ್ಣಮಯ ಛತ್ರಿ ಛಾಯೆಯ ರೋಮಾಂಚಕ ಅನುಭವ ಸವಿಯಲು ಮರೆಯದಿರಿ.



**■ ರಮಣ್ ಶೆಟ್ಟಿ ರೆಂಜಾಳ್, ಮುಂಬೈ**